--

**OS.No.30/2019**
**ಪಿಡಬ್ಲ್ಯೂ: 01**

**ದಿಃ 07-01-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ವೈ.ಡಿ.ಎಸ್ ಪ್ರತಿವಾದಿ ನಂ.3 ರಿಂದ 5, 8 ರಿಂದ 13 ರ ಪರ ವಕೀಲರಿಂದಃ**

1 ನೇ ಪ್ರತಿವಾದಿಯು ಚನ್ನಗಿರಿ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆಃ 171/2018 ಅಂತಾ ಪ್ರಕರಣ ದಾಖಲಿಸಿದ್ದರು ಎಂದರೆ ಸರಿ. ಸದರಿ ಅಸಲು ದಾವೆ ಸಂಖ್ಯೆಃ 171/2018 ರ ಪ್ರಕರಣದಲ್ಲಿ ನನ್ನನ್ನು ಪಕ್ಷಗಾರನನ್ನಾಗಿ ಮಾಡಿರಲಿಲ್ಲ ಎಂದರೆ ಸರಿ. ಚಿಕ್ಕೂಲಿಕೆರೆ ಗ್ರಾಮದ ಸರ್ವೆ ನಂ.96 ರ ಒಟ್ಟು ಕ್ಷೇತ್ರ ಮತ್ತು ಅದರ ಚೆಕ್ಕುಬಂಧಿ ಗೊತ್ತಿಲ್ಲ. ಸರ್ವೆ ನಂ.96 ರ ಆಸ್ತಿಯಲ್ಲಿ ಒಟ್ಟು ಎಷ್ಟು ಪೋಡುಗಳಿವೆ ಮತ್ತು ಯಾವ ಯಾವ ಪೋಡುಗಳ ಜಮೀನುಗಳನ್ನು ಯಾರು ಯಾರು ಸಾಗುವಳಿ ಮಾಡುತ್ತಿದ್ದಾರೆಂದು ನನಗೆ ಗೊತ್ತಿಲ್ಲ. ನಮ್ಮ ಮತ್ತು ಪ್ರತಿವಾದಿ ನಂ.1 ರವರ ವಂಶಕ್ಕೂ ಮತ್ತು ಕೃಷ್ಣಪ್ಪ ಯಾನೆ ಕರಿಯಪ್ಪ ಯಾನೆ ಭೀಮಪ್ಪ ರವರ ವಂಶಕ್ಕೂ ಸಂಬಂಧ ಇಲ್ಲ ಎಂದರೆ ಸರಿ. ಪ್ರಸ್ತುತ ನಾನು ಮಾರಶೆಟ್ಟಿಹಳ್ಳಿಯಲ್ಲಿ ನಾನು ವಾಸ ಇದ್ದೇನೆ. ದಾವಾ ಆಸ್ತಿಯಲ್ಲಿ ನಾವಾಗಲೀ ಮತ್ತು 1ನೇ ಪ್ರತಿವಾದಿಯಾಗಲೀ ಯಾವತ್ತೂ ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪಹಣಿ ಪತ್ರಿಕೆಯ ಬಗ್ಗೆ ನನಗೆ ಮಾಹಿತಿ ಇದೆ. 2012 ರಿಂದ 2015 ರವರೆಗೆ ದಾವಾ ಆಸ್ತಿಯ ಪಹಣಿ ಪತ್ರಿಕೆಗಳು ಕೃಷ್ಣಪ್ಪ ಯಾನೆ ಕರಿಯಪ್ಪ ಯಾನೆ ಭೀಮಪ್ಪ ರವರ ಹೆಸರಿನಲ್ಲಿ ಇದ್ದವು ಎಂದರೆ ಸರಿಯಲ್ಲ ಸಾಕ್ಷಿ ಕೃಷ್ಣಮೂರ್ತಿ ಎಂಬುವವರ ಹೆಸರಿನಲ್ಲಿ ಇದ್ದವು ಎಂದು ನುಡಿಯುತ್ತಾರೆ. 2012 ರಿಂದ 2015 ರವರೆಗೆ ದಾವಾ ಆಸ್ತಿಯ ಪಹಣಿ ಪತ್ರಿಕೆ 2ನೇ ಪ್ರತಿವಾದಿಯ ಹೆಸರಿನಲ್ಲಿ ಇದ್ದವು ಎಂದರೆ ಸರಿಯಲ್ಲ. 2012 ರಿಂದ 2015 ರವರೆಗೆ ದಾವಾ ಆಸ್ತಿಯ ಪಹಣಿ ಪತ್ರಿಕೆ2ನೇ ಪ್ರತಿವಾದಿಯ ಹೆಸರಿನಲ್ಲಿ ಇದ್ದ ಬಗ್ಗೆ ನಾನು ಎಲ್ಲಿಯೂ ಪ್ರಶ್ನೆ ಮಾಡಿಲ್ಲ ಎಂದರೆ ಸರಿ . ಸಾಕ್ಷಿ ಪ್ರಸ್ತುತ ಪ್ರಕರಣ ದಾಖಲಿಸಿದ್ದಾಗಿ ನುಡಿಯುತ್ತಾರೆ. 2012 ರಿಂದ 2015 ರವರೆಗೆ ದಾವಾ ಆಸ್ತಿಯ ಪಹಣಿ ಪತ್ರಿಕೆ 2ನೇ ಪ್ರತಿವಾದಿಯ ಹೆಸರಿನಲ್ಲಿ ಮತ್ತು 2 ನೇ ಪ್ರತಿವಾದಿಯೇ ಸ್ವಾಧೀನದಲ್ಲಿ ಇದ್ದಕಾರಣ 2ನೆ ಪ್ರತಿವಾದಿ, ಪ್ರತಿವಾದಿ ನಂ.3 ಮತ್ತು 4 ರವರ ಹೆಸರಿಗೆ ನೊಂದಾಯಿತ ಕ್ರಯ ಪತ್ರ ಬರೆದುಕೊಡುವುದರ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. 3 ಮತ್ತು 4 ನೇ ಪ್ರತಿವಾದಿಗಳು ದಾವಾ ಆಸ್ತಿಯನ್ನು ಕ್ರಯಕ್ಕೆ ಪಡೆದಾಗಿನಿಂದ ಇಲ್ಲಿಯವರೆಗೆ ಅವರೇ ದಾವಾ ಆಸ್ತಿಯ ಸ್ವಾಧೀನದಲ್ಲಿ

ಇದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಪ್ರಸ್ತುತ ಜಮೀನು ಆಸ್ತಿಯಾಗಿ ಉಳಿದಿಲ್ಲ ಬದಲಾಗಿ ಪರಿವರ್ತನೆಗೊಂಡು ಅದನ್ನು 3 ಮತ್ತು 4 ನೇ ಪ್ರತಿವಾದಿಗಳು ಮನೆ ನಿರ್ಮಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾನು ಯಾವತ್ತೂ ಸ್ವಾಧೀನದಲ್ಲಿಲ್ಲ ಮತ್ತು ಹಕ್ಕುದಾರನೂ ಸಹ ಅಲ್ಲ ಆದಾಗ್ಯೂ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಶ್ರೀ ಹೆಚ್.ಟಿ ಪ್ರತಿವಾದಿ ನಂ.1(ಎ) ರಿಂದ 1(ಡಿ) ಪರ ವಕೀಲರಿಂದ:**

. ಕರಿಯಪ್ಪ ರವರ ವಂಶಸ್ತರಾದ ಜಯಮ್ಮ ಹನುಮಂತಪ್ಪ, ಲಕ್ಷ್ಮಮ್ಮ ಕೃಷ್ಣಮೂರ್ತಿ ಮತ್ತು 1 ನೇ ಪ್ರತಿವಾದಿ ಗಳ ಪೈಕಿ 4 ಜನ ಮಕ್ಕಳಾದ ಜಯಮ್ಮ ಹನುಮಂತಪ್ಪ, ಲಕ್ಷ್ಮಿದೇವಿ, ಕೃಷ್ಣಮೂರ್ತಿ ರವರು ತಮ್ಮ ತಂದೆ ತಾಯಿ ಮರಣ ಹೊಂದುವುದಕ್ಕೂ ಮುಂಚೆ ಮರಣಹೊಂದಿದ್ದರು ಎಂದರೆ ಸರಿ. ಆ ಕಾರಣ ಕರಿಯಪ್ಪ ರವರ ಮರಣ ನಂತರ 1 ನೇ ಪ್ರತಿವಾದಿ ಮಾತ್ರ ವಾರಸುದಾರರು ಎಂದರೆ ಸರಿಯಲ್ಲ.ಸಾಕ್ಷಿ ಮುಂದುವರೆದು ಕರಿಯಪ್ಪ ಮತ್ತು ಲಕ್ಷಮ್ಮರವರಿಗೆ 1 ನೇ ಪ್ರತಿವಾದಿ ಮಾತ್ರ ವಾರಸುದಾರಳಾಗಿ ಉಳಿದಿದ್ದರು ಎಂದರೆ ಸರಿ ಎಂದು ನುಡಿಯುತ್ತಾರೆ. 1 ನೇಪ್ರತಿವಾದಿಯ ತಂದೆ ತಾಯಿಯ ಯೋಗಕ್ಷೇಮವನ್ನು 1ನೇ ಪ್ರತಿವಾದಿಯೇ ನೋಡಿಕೊಂಡಿದ್ದರು ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಜೀವಂತ ಇದ್ದಾಗ ದಾವಾ ಆಸ್ತಿಯ ಸಾಗುವಳಿಯನ್ನು ಅವರೇ ಮಾಡುತ್ತಿದ್ದರು ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ದಾವಾ ಆಸ್ತಿಯನ್ನು ಸಾಗುವಳಿ ಮಾಡಿ ಅದರಿಂದ ಬಂದ ಆದಾಯದಿಂದ ನನ್ನ ತಾಯಿ ಜಯಮ್ಮ ಲಕ್ಷ್ಮಮ್ಮ ಯಾನೆ ಲಕ್ಷ್ಮೀದೇವಿ ರವರ ವಿವಾಹವನ್ನು ನೆರವೇರಿಸಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿ ಜಯಮ್ಮ ಮತ್ತು ಲಕ್ಷ್ಮೀದೇವಿ ರವರು ಜೀವಂತ ಇದ್ದಾಗ ಮತ್ತು ಅವರ ಮರಣ ನಂತರ ದಾವಾ ಆಸ್ತಿಯನ್ನು 1ನೇ ಪ್ರತಿವಾದಿಯೇ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿಯಲ್ಲ.

ಕರಿಯಪ್ಪ ರವರ ಒಟ್ಟು 5 ಜನ ಮಕ್ಕಳೊಂದಿಗೆ 1ನೇ ಪ್ರತಿವಾದಿಯೇ ದಾವಾ ಆಸ್ತಿಯ ಸಾಗುವಳಿ ಮಾಡಿಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಜಯಮ್ಮ ಮತ್ತು ಲಕ್ಷ್ಮೀದೇವಿ ರವರ ಗಂಡಂದಿರರಿಗೆ (1 ಮತ್ತು 3 ನೇ ವಾದಿಗಳಿಗೆ ) ಯಾವುದೇ ಹಕ್ಕು ಇಲ್ಲ ಎಂದರೆ ಸರಿ. ಅಸಲು ದಾವೆ ನಂ. 171/2018

ರ ಪ್ರಕರಣದಲ್ಲಿ ಈ ಪ್ರಕರಣದ 1ನೇ ವಾದಿಯು ತಾನೇ ದಾವಾ ಆಸ್ತಿಗೆ ಏಕೈಕ ವಾರಸುದಾರಳು ಎಂದು ಹೇಳಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಾವು ಕರಿಯಪ್ಪ ರವರ ವಂಶಸ್ತರು ಎಂದು ತೋರಿಸಲು ಕಂದಾಯ ಇಲಾಖೆಯವರು ನೀಡಿದ ವಂಶವೃಕ್ಷದ ದಾಖಲೆ ಹಾಜರುಪಡಿಸಿಲ್ಲ. ದಾವಾ ಆಸ್ತಿಗೆ 1 ನೇ ಪ್ರತಿವಾದಿ ಮಾತ್ರ ಹಕ್ಕುದಾರಳು ಮತ್ತು ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ಕೋರಿದ ಪರಿಹಾರ ಪಡೆಯಲು ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.